ಶ್ರೀ ಎಂ. ಮಾದಯ್ಯಗೌಡ.—ಸ್ವಾಮಿ, ಮಳವಳ್ಳಿ ಟ್ಯಾಂಕ್‌ನಿಂದ ಏನು ನೀರು ಸರಬರಾಜಾಗುತ್ತಿದೆ. ಇದಂ ಸಾಕಾಗುತ್ತಿಲ್ಲ. ಅಲ್ಲದೇ ಈ ಟ್ಯಾಂಕ್ ಕೆಪ್ಯಾಸಿಟಿ ಕೂಡ ಸಾಕಾಗದಿರುವುದರಿಂದ ಇದನ್ನು ವಿಸ್ತರಣೆ ಮಾಡಬೇಕು. ಇದರ ನೀರನ್ನು ಬರೇ ಕುಡಿಯುವುದಕ್ಕೇ ಅಲ್ಲದೆ ವ್ಯವಸಾಯಕ್ಕೂ ಕೂಡ ಉಪಯೋಗಿಸುತ್ತಾರೆ. ಆದ್ದರಿಂದ ಜನಗಳಿಗೆ ಕುಡಿಯುವುದಕ್ಕೆ ನೀರು ಸಾಕಾಗುತ್ತಿಲ್ಲ. ಆದಕಾರಣ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ಈ ಮಾರೇನಹಳ್ಳಿ ಟ್ಯಾಂಕ್‌ನ ಕೆಪ್ಯಾಸಿಟಿಯನ್ನು ಜಾಸ್ತಿ ಮಾಡುವ ಬಗ್ಗೆ ಈಗಾಗಲೇ ಎಸ್ಟಿಮೇಟ್ ಮಾಡಿ ಕಳುಹಿಸಿರುವುದರಿಂದ ದಯವಿಟ್ಟು ಆ ಎಸ್ಟಿಮೇಟನ್ನು ಮಂಜೂರು ಮಾಡಿಕಳುಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಈ ಟ್ಯಾಂಕ್‌ಗೆ ಕೃಷ್ಣರಾಜಸಾಗರ ಪೆರಿನಿಯಲ್‌ನಿಂದ ವರ್ಷದ ೧೨ ತಿಂಗಳೂ ನೀರು ಬರುತ್ತಲೆ ಇರುತ್ತದೆ, ಆದ್ದರಿಂದ ಇದಕ್ಕೆ ಯಾವ ನೀರಿನ ಅಭಾವವೂ ಇಲ್ಲ.

ಶ್ರೀ ಎಂ. ಮಾದಯ್ಯಗೌಡ.—ಸ್ವಾಮಿ, ಈ ಟ್ಯಾಂಕ್‌ನ ಕೆಪ್ಯಾಸಿಟಿಯನ್ನು ಜಾಸ್ತಿ ಮಾಡಬೇಕೆಂದು ಈಗಾಗಲೇ ಪಿ. ಡಬ್ಲ್ಯು. ಡಿ. ಗೆ ಒಂದು ಎಸ್ಟಿಮೇಟನ್ನು ಕಳುಹಿಸಿರುವುದರಿಂದ ದಯವಿಟ್ಟು ಅದನ್ನು ಮಂಜೂರು ಮಾಡಿ ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

SRI D. DEVARAJ URS.—Now that hon'ble Member has pointed out. I will get that from the municipal Administration Department and I shall see how best we can maintain good supply of water to the town.

Sites distribution in Krishnarajapur Hobli Bangalore South Taluk

696 SRI B.V. RAMACHANDRA REDDY (Varthur).—Will the Minister of State for Housing be pleased to state:—

(*a*) the number of poor people to whom sites have been distributed in Varthur and Krishnarajapura hoblies of Bangalore South taluk;

(*b*) whether the said sites have been distributed to the local people only or to the persons residing outside the taluk;

(*c*) the number of sites of this taluk allotted to the people of other taluks; and the basis on which they were allotted;

(*d*) whether it is a fact that due to allotment of sites to others, the large number of local people have been deprived of getting sites; and how this anamoly would be set right?

SRI P.F. RODRIGUES (Minister of State for Housing).—

(*a*) 11,369.

(*b*) Sites have been allotted to the local people only.

(*c*) This question does not arise in view of reply to clause (b) above.

(*d*) This question does not arise in view of reply to Clause 'b' above.

ಶ್ರೀ ಬಿ.ವಿ. ರಾಮಚಂದ್ರ ರೆಡ್ಡಿ.—ಸ್ವಾಮಿ, ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿರುವ ವರ್ತೂರು ಪಟ್ಟು, ಕೃಷ್ಣರಾಜಪುರದ ಹೋಬಳಿಗಳಲ್ಲಿ ಎಷ್ಟು ಬಡಜನಕ್ಕೆ ನಿವೇಶನಗಳನ್ನು ಹಂಚಲಾಗಿದೆ, ಎಂದು ಕೇಳಿರುವುದಕ್ಕೆ ತಾವು ೧೧,೩೬೯ ನಿವೇಶನಗಳನ್ನು ಹಂಚಲಾಗಿದೆ ಎಂದು ಹೇಳಿದ್ದೀರಿ. ಮತ್ತು ಹಂಚಿದ ನಿವೇಶನಗಳು ಸ್ಥಳೀಕರಿಗೆ ಮಾತ್ರವೇ ನೀಡಲಾಗಿದೆಯೇ ಅಥವಾ ತಾಲ್ಲೂಕಿನಲ್ಲಿ ಇಲ್ಲದೆ ಇರತಕ್ಕ ವ್ಯಕ್ತಿಗಳಿಗೆ ನೀಡಲಾಗಿದೆಯೆ ಎಂದು ಕೇಳಿರುವುದಕ್ಕೆ ಸ್ಥಳೀಕರಿಗೆ ಮಾತ್ರ ನೀಡಲಾಗಿದೆ ಎಂದು ಉತ್ತರ ನೀಡಿದ್ದೀರಿ. ಸ್ವಾಮಿ, ಈ ಸಂದರ್ಭದಲ್ಲಿ ಒಂದು ಮಾತನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ವರ್ತೂರು ಪಟ್ಟು, ಕೃಷ್ಣರಾಜಪುರ ಹೋಬಳಿಗಳಲ್ಲಿ ಒಟ್ಟು ೧೬ ಸಾವಿರ ಕುಟುಂಬಗಳಿವೆ. ಇದರಲ್ಲಿ ೫ ಸಾವಿರ ಹರಿಜನ ಕುಟುಂಬಗಳಿವೆ ಎಂದು ಹೇಳಿದ್ದೀರಿ. ತಾವು ಕೊಟ್ಟಿರುವ ಉತ್ತರ ನೋಡಿದರೆ ೧೧,೩೬೯ ನೈಟುಗಳನ್ನು ಹಂಚಿದ್ದೇವೆ ಎಂದು ಹೇಳುತ್ತಿದ್ದೀರಿ. ತಾವು ಕೊಟ್ಟಿರತಕ್ಕ ಅಂಕಿ ಸಂಖ್ಯೆಗಳು ಏನಿದೆ ಇದು ತಪ್ಪಾಗಿದೆಯೆಂದು ನಾನು ಭಾವಿಸುತ್ತೇನೆ.

†Sri R.F. Rodrigues.—Sites have been distributed to all the site-less people. If you say something wrong has taken place, please bring it my notice. We have distributed sites to people who are not owning any site and whose annual income is not more than 2,000/- per year. ಈ ಯೋಜನೆ ಪ್ರಕಾರ ನಾವು ೧೧,೩೬೯ ಜನರಿಗೆ ನೈಟುಗಳನ್ನು ಕೊಟ್ಟಿದ್ದೇವೆ.

ಶ್ರೀ ಬಿ.ವಿ. ರಾಮಚಂದ್ರ ರೆಡ್ಡಿ.—ಸ್ವಾಮಿ, ಇಲ್ಲಿ ೧೧,೩೬೯ ನೈಟುಗಳನ್ನು ಪಂಚತಕ್ಕ ಆಗತ್ಯ ಇತ್ತೇ? ಬೈಯಪ್ಪನ ಹಳ್ಳಿಯಲ್ಲಿರತಕ್ಕವರಿಗೆ ತಾವು ಒಂದು ನೈಟನ್ನೂ ಕೊಟ್ಟಿಲ್ಲಿ. ನಾರಾಯಣ ಪುರದಲ್ಲಿರತಕ್ಕವರಿಗೂ ತಾವು ಒಂದು ನೈಟನ್ನೂ ಕೊಟ್ಟಿಲ್ಲ, ವಿಜಯ ಪುರದಲ್ಲಿರತಕ್ಕವರಿಗೂ ತಾವು ಒಂದು ನೈಟನ್ನೂ ಹಂಚಿಲ್ಲ. ಇಲ್ಲಿ ಏನಾಗುತ್ತದೆ ಎಂದರೆ ಬಿ.ಡಿ.ಓ. ಮತ್ತು ತಹಸೀಲ್ದಾರರು ಒಂದು ಗ್ಯಾಂಗ್ ಮಾಡಿಕೊಂಡು ಈ ನೈಟುಗಳನ್ನು ಕೆಲವು ಪ್ರತಿಷ್ಠಿತ ವ್ಯಕ್ತಿಗಳಿಗೆ ಕೊಟ್ಟಿದ್ದಾರೆ. ಇದು ನಮ್ಮ ಕ್ಷೇತ್ರದ ಜನಗಳಿಗೆ ಸಿಕ್ಕಿಲ್ಲ, ಬಹಳ ಅನ್ಯಾಯವಾಗಿದೆ. ಇವರು ಈ ರೀತಿ ನೈಟುಗಳನ್ನು ಹಂಚಿದ್ದೇವೆಂದು ತೋರಿಸಿ ಪಕ್ಕದಲ್ಲಿ ಇನ್ನೊಂದು ಸ್ಲಂ ಉತ್ಪತ್ತಿ ಮಾಡುತ್ತಿದ್ದಾರೆ.

ಶ್ರೀ ಪಿ.ಎಫ್. ರೋಡ್ರಿಗ್ಸ್.—ಹಾಗೇನಾದರೂ ಅನ್ಯಾಯವಾಗಿದ್ದರೆ ಅದನ್ನು ಸರ್ಕಾರದ ಗಮನಕ್ಕೆ ತಂದರೆ ಕೂಡಲೇ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

Development of Tourism in the State.

628 Sri S.M. Sheernali Chandrasekhar (Hosanagar).—Will the Minister for Transport and Tourism be pleased to state:—

(*a*) whether there are any fresh proposals before the Government to develop tourism in the State;

(*b*) whether the Government is aware that most of the tourists from Western Countries who come to India visit only Delhi, Agra, Kashmir and other such important tourist places in the north and never come to Karnataka;

(*c*) whether it is due to the fact that there is lack of proper Hotel accomodation and air strip facilities in Karnataka State;

(*d*) if so, the arrangement that the Government is thinking of opening proper hotels and providing air strip facilities at important tourist places in the State;